ಬಂದಿದ್ದಳು. ಆದರೆ ಸಿದ್ದಯ್ಯನೂ ಆಗ ಪೂರ್ವಿಕರ ಹಳೆಮನೆ ಎರಡು ಭಾಗ ಆಗಲು ಒಪ್ಪಲಿಲ್ಲ. ಹಳೆ ಮನೆಯನ್ನು ಚಂದ್ರಪ್ಪನಿಗೇ ಬಿಟ್ಟು ತಾನು ಬೇರೆ ಕಡೆ ವಾಸವಿದ್ದು ಆಮೇಲೆ ಮನೆ ಕಟ್ಟಿಕೊಳ್ಳುವುದಾಗಿ ಹೇಳಿದ. ಆಗ ಚಂದ್ರಪ್ಪ, 'ನಾನು ನನ್ನ ದಲ್ಲಾಳಿ ವ್ಯವಹಾರದಲ್ಲಿ ಸಂಪಾದಿಸಿರುವ ಎರಡು ಸೈಟುಗಳು ಊರಿನ ಮೇಗಲ ರಸ್ತೆ ಪಕ್ಕ ಇವೆ. ಅವುಗಳಲ್ಲಿ ಒಂದನ್ನು ಸಿದ್ದಯ್ಯನಿಗೆ ಬರೆದುಕೊಡ್ತೀನಿ. ಅವ್ನು ಅಲ್ಲಿ ಮನೆ ಕಟ್ಟಿಕೊಳ್ಳಲಿ' ಎಂದ. ನಾಳೆಯಿಂದಲೇ ಇವರು ತಂತಮಗೆ ಹಂಚಿಕೆಯಾಗಿರುವ ಆಸ್ತಿಯಲ್ಲಿ ಕೃಷಿ ಮಾಡಿಕೊಂಡು ಹೋಗಲು ಹೇಳಲಾಯಿತು. ಮುಂದೆ ಅವರವರೇ ಅವರವರ ಖರ್ಚಿನಲ್ಲಿ ತಮ್ಮ ತಂದೆಯ ಹೆಸರಿನಲ್ಲಿರುವ ಜಮೀನನ್ನು ತಂತಮ್ಮ ಹೆಸರುಗಳಿಗೆ ಖಾತೆ, ಕಂದಾಯ ಸಂಬಂಧದ ಪತ್ರ ವಗೈರೆಗಳನ್ನು ತಾಲ್ಲೂಕು ಕಚೇರಿಯಲ್ಲಿ ಸಮಖರ್ಚಿನಲ್ಲಿ ಮಾಡಿಸಿಕೊಳ್ಳಲು ಎಮ್ಮೆಕಾಳಯ್ಯ ಒತ್ತಿ ಒತ್ತಿ ಹೇಳಿದ.

ಆಮೇಲೆ ಎಲ್ಲರ ಗಮನ ಹಳೆಒಲೆ ಮೇಲೆ ಕೊತಕೊತನೆ ಬೇಯುತ್ತಿದ್ದ ಚಿನ್ನವ್ವನ ಮೊಟ್ಟೆಕೋಳಿ ಸಾರಿನ ಊಟ ಗಮಗಮ ಅನ್ನುತ್ತಿದ್ದ ಕಡೆಗೆ ಹರಿಯಿತು. ಕಜ್ಜಿನಿಂಗಣ್ಣ, 'ಎಲ್ಲರಿಗೂ ಸಮಾಧಾನವಾಯ್ತೆ? ಆಮೇಲೆ ಯಾರೂ ಹೆಚ್ಚುಕಮ್ಮಿಯಾಯ್ತು ಅಂತ ತಕರಾರು ತೆಗಿಬಾರದು' ಎಂದು ಹೇಳುತ್ತಾ, ಸಿದ್ದಯ್ಯನಿಗೆ, 'ಈ ವರ್ಷದಲ್ಲಾದ್ರು ನೀನು ಮದುವೆ ಮಾಡ್ಕೊಂಡು ನಮ್ಗೆಲ್ಲಾ ಮದುವೆ ಊಟ ಹಾಕ್ಸಪ್ಪಾ' ಎಂದು ಸಿದ್ದಯ್ಯನನ್ನು ರೇಗಿಸಿದರು. ಸಿದ್ದಯ್ಯ, 'ಮೊದ್ಲು ಮನೆ ಕಟ್ಟಿಕೊಳ್ತಿನಿ. ಆಮೇಲೆ ತಪ್ಪದೆ ಊಟ ಹಾಕಿಸ್ತಿನಿ, ಸ್ವಲ್ಪ ತಡಕೊಳ್ಳಿ ಚಿಕ್ಕಪ್ಪ' ಎಂದು ಅವರಿಗೆ ಸಮಜಾಯಿಷಿ ಹೇಳುತ್ತಾ ಊಟಕ್ಕೆ ಸಿದ್ಧಗೊಳಿಸತೊಡಗಿದ. 'ನೀನು ಮೊದ್ಲು ಮದುವೆ ಆಗಿ, ಸಂಸಾರ ಶುರುಮಾಡಪ್ಪ!' ಎಂದು ಎಮ್ಮೆಕಾಳಯ್ಯ ಸಿದ್ಧಯ್ಯನಿಗೆ ಬುದ್ಧಿಮಾತು ಹೇಳುತ್ತಾ ಅತ್ತಿಗೆಯ ಕಡೆಗೆ ನೋಡಿದ. ಅತ್ತಿಗೆ ಚಿನ್ನವ್ವ, 'ಈ ಸಾರಿ ಸಿದ್ದಪ್ಪನ ಮದುವೆ ಮಾಡುವ!' ಎಂದು ಹೇಳುತ್ತಾ, ಸೊಸೆ ಗೌರಿಗೆ, 'ಯಾಕೆ ಅಂಗೆ ನಿಂತೇ ಇದ್ದೀ? ಅಡುಗೆ ಮನೆಗೆ ಹೋಗಿ ನಾನು ಮಾಡಿರುವ ಊಟ ತಂದು ಎಲ್ಲರಿಗೂ ಬಡಿಸು. ನಾನು ಹಳೆಒಲೆ ಮೇಲಿಂದ ಬಾಡ್ನೆಸ್ರು ತಂದು ಬಿಡ್ತೀನಿ' ಎಂದಳು. ಹೊತ್ತಾರೆಯೇ ಎದ್ದು ಹುಂಜವ ಕುಯ್ದು ಅಡುಗೆ ಮಾಡುವ ಅಂತ ಹುಂಜವನ್ನು ಹಿಡಿಯಲು ಹೋದಾಗ ಅದು ಅವಳ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ ಹೋದ್ದರಿಂದ, ಕೊನೆಗೆ ಆಕೆ ಮೊಟ್ಟೆಕೋಳಿಯನ್ನೇ ಹಿಡಿದು ಕುಯ್ದು ಬಾಡ್ನೆಸ್ರು ಮಾಡಿದ್ದಳು.

ಗೌರಿ ಅಡುಗೆ ಮನೆಗೆ ಹೋದಳು; ನಡುಮನೆಯಲ್ಲಿ ಎಲ್ಲರೂ ಊಟಕ್ಕೆ ಸಾಲಾಗಿ ಕೂತಿದ್ದರು. ಚಿನ್ನವ್ವ ಮೊಟ್ಟೆ ಕೋಳಿಯ ಬಾಡ್ನೆಸ್ರನ್ನು ತಂದು ಬಿಡಲು ಕೊಟ್ಟಿಗೆಯಲ್ಲಿದ್ದ ಹಳೆಒಲೆಯ ಕಡೆಗೆ ಹೋದಳು. ಚಿನ್ನವ್ವನ ಮೈದುನರಿಬ್ಬರೂ ನಡುಮನೆಯಲ್ಲಿ ಕೂತು ತಮ್ಮ ಅತ್ತಿಗೆಯ ಕೈರುಚಿಯ ಬಾಡ್ನೆಸ್ರ ಸವಿಯನ್ನು ಸವಿಯುತ್ತಾ, ಮತ್ತೆ ಮತ್ತೆ ಗಳಾಸಿಗೆ ಬಾಡ್ನೆಸ್ರು ಹಾಕಿಸಿಕೊಂಡು ಕುಡಿದರು. ಉಣ್ಣುವ ತಟ್ಟೆಗಳು ಎಲ್ಲರಿಗೂ ಸಾಲದೆ ಬಂದದ್ದರಿಂದ ಚಂದ್ರಪ್ಪ ತನ್ನ ಮಕ್ಕಳಿಬ್ಬರನ್ನೂ ತನ್ನೊಂದಿಗೆ ಒಟ್ಟಿಗೇ ಕೂರಿಸಿಕೊಂಡು ಉಣತೊಡಗಿದನು. ಮುಕುಂದನಿಗೆ ತನ್ನ ಅಪ್ಪನ ಜೊತೆ ಕೂತು ಉಂಡು ಅಭ್ಯಾಸವಿದ್ದರಿಂದ ಅವನಿಗೆ ಅದು ಸಹಜವಾಗಿತ್ತು. ಆದರೆ ಭಾಗ್ಯಳಿಗೆ ಇದು ಮೊದಲ ಬಾರಿ ಆಗಿದ್ದರಿಂದ ಆಕೆ ಮುಜುಗರ ಪಡುತ್ತಾ ತನ್ನ ಅಪ್ಪನೊಂದಿಗೆ ಕೂತು ಉಣ್ಣಲು ತೊಡಗಿದಳು. ಸಿದ್ದಪ್ಪ ಮತ್ತು ರಾಜಣ್ಣ ಅಕ್ಕಪಕ್ಕ ಕೂತು, 'ಮೊಟ್ಟೆಕೋಳಿ ಮಾಂಸ ತುಂಬಾ ಹದವಾಗಿ ಬೆಂದಿದೆ. ಸಾರೂ ಚೆನ್ನಾಗಿ ಆಗಿದೆ' ಎಂದು ತಮ್ಮವ್ವನ ಕೈಗುಣ ಮತ್ತು ಮೊಟ್ಟೆಕೋಳಿಯ ಸಾರಿನ ರುಚಿಯನ್ನು ಹೊಗಳುತ್ತಾ, ಇಬ್ಬರೂ ಪರಸ್ಪರ ಮಾತನಾಡುತ್ತಾ ಸವಿಯತೊಡಗಿದರು.

ಓದುವ ತನ್ನ ಮೊಮ್ಮಗ ಮುಕುಂದನಿಗೆ ಇಷ್ಟ ಅಂತ ಚಿನ್ನವ್ವ ಬಾಡ್ನೆಸ್ರ ಮಡಕೆಯಲ್ಲಿ ಕೋಳಿಯ ಗುಂಡಕಾಯನ್ನು ಸೌಟಿನಿಂದ ತಡವುತ್ತಾ, ತನ್ನ ಮನೆ ಒಂದಾಗಿದ್ದದ್ದು ಮೂರು ಪಾಲಾದುದರ ಬಗ್ಗೆ ನೋಯುತ್ತಾ, ಮುರಿದು ಹೋಗಿದ್ದ ತನ್ನ ಮಗ ಚಂದ್ರಪ್ಪ ಉರುಫ್ ಕುಂಟಪ್ಪನ ಸಂಸಾರ ಮತ್ತೆ ಒಂದಾದುದನ್ನು ಕಾಣುತ್ತಾ, ತನ್ನ ಗಂಡ ಸಿದ್ದೇಗೌಡ ಈಗ ಬದುಕಿದ್ದು ಇದನ್ನೆಲ್ಲಾ ನೋಡಿದ್ದರೆ ಸಂತೋಷಪಡುತ್ತಿದ್ದರು ಎಂದುಕೊಳ್ಳುತ್ತಾ, ಸೌಟಿಗೆ ಸಿಕ್ಕ ಗುಂಡಕಾಯನ್ನು ಮೊಮ್ಮಗ ಮುಕುಂದನಿಗೆ ಬಡಿಸಲು ಚಂದ್ರಪ್ಪನ ಹಗಲಿನತ್ತ ಧಾವಿಸಿದಳು.

●